# ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಾಗರ.

ಸಿ.ಸಿ. ನಂ. 1616/2023

| ಫಿರ್ಯಾದಿಃ- | ವಿರುದ್ಧ | ಆರೋಪಿಃ- |
|---|---|---|
| ಕಿರಣ್ ಬಿ.ಎಸ್ ಬಿನ್ ಸುರೇಂದ್ರ,<br>ವಯಸ್ಸು ಸುಮಾರು 40 ವರ್ಷ,<br>ವಾಸಃ ತೀರ್ಥಹಳ್ಳಿ ತಾಲ್ಲೂಕು, ಕೆಳಕೆರೆ<br>ಮೇಳಿಗೆ ಗ್ರಾಮ, ಶಿವಮೊಗ್ಗ ಜಿಲ್ಲೆ. | | ದೇವಿ ಪ್ರಸಾದ್ ಬಿ.ಎಂ. ಬಿನ್<br>ಮಂಜಪ್ಪ ಬಿ.ಟಿ.<br>ವಯಸ್ಸು ಸುಮಾರು 40 ವರ್ಷ,<br>ವಾಸಃ ಎಸ್.ಆರ್.ಆರ್.ಮಿಲ್ ರಸ್ತೆ,<br>ಮೇಳಿಗೆ ಆಸ್ಪತ್ರೆ ಹತ್ತಿರ,<br>ತೀರ್ಥಹಳ್ಳಿ ಟೌನ್, ಶಿವಮೊಗ್ಗ ಜಿಲ್ಲೆ.<br>ಮತ್ತು<br>ದೇವಿ ಪ್ರಸಾದ್ ಬಿ.ಎಂ. ಬಿನ್<br>ಮಂಜಪ್ಪ ಬಿ.ಟಿ.<br>ವಾಸಃ ಬರಗಿ ಗ್ರಾಮ, ಸೊರಬ ತಾಲ್ಲುಕು. |

## ಆಪಾದನೆ

ಆರೋಪಿಯಾದ ನೀವು, ನಿಮ್ಮ ಆರ್ಥಿಕ ಅಡಚಣೆಯನ್ನು ನಿವಾರಿಸುವ ಸಲುವಾಗಿ, ದಿನಾಂಕಃ08.04.2022 ರಂದು ಪಿರ್ಯಾದುದಾರರಿಂದ ರೂ. 4,00,000/- (ನಾಲ್ಕು ಲಕ್ಷರೂ ಗಳನ್ನು ಕೈಗಡ ಸಾಲವನ್ನಾಗಿ ಪಡೆದು, ಸದರಿ ಹಣವನ್ನು ಎರಡು ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ತಿಳಿಸಿರುತ್ತೀರಿ. ನಂತರ, ಸಕಾಲದಲ್ಲಿ ನೀವು ಹಣ ಪಾವತಿಸದೇ ಇದ್ದುದ್ದರಿಂದ, ಪಿರ್ಯಾದುದಾರರು ಸಾಲವನ್ನು ಮರುಪಾವತಿಸುವಂತೆ ದೂರವಾಣಿ ಮೂಲಕ ಕರೆ ಮಾಡಿ ಕೇಳಿದಾಗ, ದಿನಾಂಕಃ05.06.2022 ರಂದು ನೀವು ನಿಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ತೀರ್ಥಹಳ್ಳಿ ಶಾಖೆಗೆ ಸೇರಿದ ಚೆಕ್ ನಂ. 506110 ರ ಮೇಲೆ ರೂ. 4,00,000/-ರೂ ಗಳನ್ನು ದಿನಾಂಕಃ 08.06.2022 ರಂದು ನಗಧೀಕರಿಸಿಕೊಳ್ಳುವಂತೆ ನಮೂದಿಸಿ ನೀಡಿರುತ್ತಾರೆ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂದು ತಿಳಿದಿದ್ದರೂ ಕೂಡ ನಗಧೀಕರಿಸಲು ನೀಡಿರುತ್ತೀರಿ.

ನಂತರ, ಫಿರ್ಯಾದುದಾರರು ದಿನಾಂಕಃ08.06.2022 ರಂದು ತಮ್ಮ ಖಾತೆ ಇರುವ ಸಾಗರದ ಬ್ಯಾಂಕ್ ಆಫ್ ಬರೋಡಾ, ಸಾಗರ ಶಾಖೆಗೆ ನೀವು ನೀಡಿದ ಚೆಕ್ಕನ್ನು ಸಲ್ಲಿಸಿದಾಗ, ಆರೋಪಿ ಖಾತೆಯಲ್ಲಿ ಸೂಕ್ತ ಪ್ರಮಾಣದ ಹಣ ಇಲ್ಲ 'Funds insufficient' ಎಂಬ

This is a True Copy of the Court Records Online. Authenticated @ districts.ecourtsindia.com/cnr/KASM610035742023/truecopy/order-1.pdf

ಷರಾದೊಂದಿಗೆ ಅಮಾನ್ಯಗೊಂಡು ದಿನಾಂಕಃ10.06.2022 ರಂದು ವಾಪಾಸ್ಸು ಬಂದಿರುತ್ತದೆ. ನಿಮ್ಮ ಖಾತೆಯಲ್ಲಿ ಹಣ ಇಲ್ಲ ಎನ್ನುವ ವಿಚಾರ ಪಿರ್ಯಾದಿದಾರರಿಗೆ ತಿಳಿದ ನಂತರ, ದಿನಾಂಕಃ 22.06.2022 ರಂದು ವಕೀಲರ ಮೂಲಕ ಮೂಲಕ ಹಣ ಮರುಪಾವತಿಸುವಂತೆ 2 ವಿಳಾಸಗಳಿಗೆ ನೋಟಿಸ್ ಕಳುಹಿಸಿದ್ದು, ಆರೋಪಿಯು ಈ ಎರಡು ನೋಟೀಸ್‌ಗಳನ್ನು ದಿನಾಂಕಃ30.06.2022 ರಂದು ಜಾರಿ ಪಡೆಯದೆ ವಾಪಸ್ ಬಿಟ್ಟಿರುತ್ತಾರೆ. ಆದರೂ ಸಹಾ ನೀವು ಈ ವರೆಗೂ ಚೆಕ್ಕಿನ ಹಣವನ್ನು ನೀಡಿರುವುದಿಲ್ಲ, ಮತ್ತು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂಬುದನ್ನು ತಿಳಿದಿದ್ದರೂ, ಫಿರ್ಯಾದುದಾರರಿಗೆ ಮೋಸ, ವಂಚನೆ ಮಾಡಬೇಕೆಂಬ ಉದ್ದೇಶದಿಂದ ಚೆಕ್ಕು ನೀಡಿ, ಆ ಮೂಲಕ ನೀವು, ಎನ್. ಐ. ಆಕ್ಟ್ ಕಲಂ 138 ರಡಿಯಲ್ಲಿ ಅಪರಾಧವೆಸಗಿರುತ್ತೀರಿ ಎಂದು ಈ ಮೂಲಕ ಆಪಾದಿಸಲಾಗಿದ್ದು, ಅದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

(ಆಪಾದನೆಯನ್ನು ದಿನಾಂಕಃ 26.03.2024 ರಂದು ತೆರೆದ ನ್ಯಾಯಾಲಯದಲ್ಲಿ ಮಾಡಲಾಗಿದೆ.)

ಪ್ರಶ್ನೆ 1. ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಆಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?
ಉತ್ತರಃ-

ಪ್ರಶ್ನೆ 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ-

(ದೀಪ ಕೆ.ಆರ್)
ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

This is a True Copy of the Court Records Online. Authenticated @ districts.ecourtsindia.com/cnr/KASM610035742023/truecopy/order-1.pdf

www.ecourtsindia.com